




# ಭಕ್ತ ರಾಖಾ


ಕಥೆ: ಟಿ.ಎಂ. ಸುಂದರರಾಮನ್ ಚಿತ್ರ: ಸದಾಶಿವಂ




4
ಪಾಖಾ, ಪಾಂಡುರಂಗನು ನಮ್ಮನ್ನು ಮಹಾಪಾಪದಿಂದ ಪಾರುಮಾಡಿದ. ಆದ್ದರಿಂದ ನಾವು ಅವನಿಗೋಸ್ಕರವೇ ಬದುಕೋಣ.
ನಿಜ ಸ್ವಾಮಿ. ದೇವರು ಈ ರೀತಿ ಪ್ರಪಂಚದ ಎಲ್ಲ ಜೀವಿಗಳನ್ನೂ ರಕ್ಷಿಸುತ್ತಿರುವಾಗ, ಅವನ ಸಂಪೂರ್ಣ ಕೃಪೆಗಾಗಿ ಜೀವಿಸುವುದೇ ನಮ್ಮ ಜೀವನದ ಗುರಿಯಾಗಿದೆ.
ರಾಖಾ ತನ್ನೆಲ್ಲ ಸೊತ್ತನ್ನು ಸೇವೆಗಾಗಿ ವಿನಿಯೋಗಿಸಿದ. ತಮ್ಮ ಕುಟುಂಬವನ್ನು ಸಣ್ಣ ಒಂದು ಗುಡಿಸಿಲಿಗೆ ಸ್ಥಳಾಂತರ ಮಾಡಿದ.
5
ರಾಖಾ ಧರಿಸುತ್ತಿದ್ದ ಒಂದೇ ಒಂದು ಜೊತೆ ಬಟ್ಟೆ ಹರಿದು ಹೋಯಿತು. ಒಂದು ದಿನ ಅವನು ಬೀದಿಯಲ್ಲಿ ಬಿದ್ದಿದ್ದ ಹರಿದ ಬಟ್ಟೆಯನ್ನು ಎತ್ತಿಕೊಂಡ. ಆಗ ಅಲ್ಲಿಗೆ ಒಬ್ಬ ಬಡವ ಓಡುತ್ತ ಬಂದ ...
ಅದನ್ನೆತ್ತಿಕೊಳ್ಳಬೇಡ. ಇದನ್ನು ನಾನು ನನ್ನ ಪಂಜಿನ ಸುತ್ತ ಸುತ್ತಿಕೊಳ್ಳುತ್ತೇನೆ. ನೀನಾದರೋ ಭಕ್ತ. ಈ ಬಟ್ಟೆಯ ಮೇಲೆ ನಿನಗೆ ಮೋಹವುಂಟಾದೀತು.
ಸ್ವಾಮಿ, ದಯವಿಟ್ಟು ನನ್ನನ್ನು ಕ್ಷಮಿಸಿ.
ರಾಖಾ ಎಲೆಗಳನ್ನು ಜೋಡಿಸಿ, ಹೊಲಿದು ಅದರಿಂದ ತನ್ನ ದೇಹವನ್ನು ಮುಚ್ಚಿಕೊಂಡ.
6
ರಾಖಾನ ಮಗಳು ಹಾಗೂ ನಾಮದೇವನ ಮಗಳು ಚಂದ್ರಭಾಗಾ ನದಿಯಲ್ಲಿ ಬಟ್ಟೆ ಒಗೆಯುತ್ತಿದ್ದರು.
ನಿನ್ನ ಬಟ್ಟೆಯಿಂದ ನನ್ನ ಮೇಲೆ ಕೊಳೆ ಎರಚುತ್ತಿದೆ. ತುಸು ಜಾಗ್ರತೆಯಾಗಿ ಒಗೆ.
ನೀನು ಕುಂಬಾರರ ಮಗಳು. ನಿನ್ನ ತಂದೆ ಕಪಟ ಭಕ್ತ. ನೀನು ಅಷ್ಟೊಂದು ಸ್ವಚ್ಛತೆಯನ್ನು ಆಚರಿಸುವುದೇಕೆ?
ಪಾಂಡುರಂಗನು ನನ್ನ ತಂದೆಯ ಭಕ್ತಿಗೆ ಮೆಚ್ಚಿ ಬೆಕ್ಕಿನ ಮರಿಯನ್ನು ಒಲೆಯಿಂದ ಕಾಪಾಡಿದ. ನಿನ್ನ ತಂದೆ ಪಾಂಡುರಂಗನೊಂದಿಗೆ ಮತ್ತೆ ಮತ್ತೆ ಮಾತನಾಡಿ ಅವನಿಗೆ ಕಷ್ಟ ಕೊಡುತ್ತಿದ್ದಾನೆ.
ನನ್ನ ತಂದೆಯ ಭಕ್ತಿಯಲ್ಲಿ ನೀನು ಕುಂದು ಕಾಣುತ್ತಿದ್ದೀಯಾ?
7
ನಾಮದೇವನ ಮಗಳು ಕೂಡಲೇ ತನ್ನ ತಂದೆಯ ಬಳಿಗೆ ಓಡಿ ಬಂದು, ಅವನಿಗೆ ದೂರು ಹೇಳಿದಳು.
ಅಪ್ಪಾ, ನಿನ್ನ ಭಕ್ತಿಗಿಂತ ಆ ಕುಂಬಾರನ ಭಕ್ತಿಯೇ ಮೇಲಂತೆ. ಅವನ ಮಗಳು ಹೇಳುತ್ತಿದ್ದಾಳೆ.
ಅವಳ ಒತ್ತಾಯಕ್ಕೆ ಮಣಿದು ಅವನು ಪಾಂಡುರಂಗನನ್ನೇ ಕೇಳಿದ, ''ಯಾರು ಶ್ರೇಷ್ಠ ಭಕ್ತ?'' ಎಂದು.
ನೀನು ಅಷ್ಟೊಂದು ಉದ್ವೇಗಕ್ಕೆ ಒಳಗಾಗಬೇಡ. ಭಕ್ತರು ಉದ್ವೇಗಕ್ಕೆ ಒಳಗಾಗುವುದಿಲ್ಲ. ಯಾರು ಶ್ರೇಷ್ಠ ಭಕ್ತನೆಂಬುದು ಪಾಂಡುರಂಗನಿಗಷ್ಟೇ ಗೊತ್ತು.


8
ನಾಮದೇವನು ಪಾಂಡುರಂಗನ ಮೇಲೆ ಹಲವು ಅಭಂಗಗಳನ್ನು ರಚಿಸಿ ಹಾಡುತ್ತಾ ಅವನ ಪೂಜೆ ಮಾಡುತ್ತಿದ್ದ. ಇದರಿಂದ ಸಂತುಷ್ಟನಾದ ಪಾಂಡುರಂಗನು ಅವನೊಂದಿಗೆ ನೇರ ಮಾತನಾಡುತ್ತಿದ್ದ.
ರಾಖಾನಿಗೆ ಸಮಾನನಾದ ಭಕ್ತನಿಲ್ಲ.
ಹಾಗಿದ್ದರೆ ಅದನ್ನು ನನಗೆ ತೋರಿಸು.
ನಾನು ರುಕ್ಮಿಣಿಯೊಂದಿಗೆ ರಾಖಾನ ಮನೆಗೆ ಹೋಗುತ್ತೇನೆ. ನೀನು ಅಲ್ಲಿಗೆ ಬಾ.
9
ರಾಖಾ ಕಾಡಿನಲ್ಲಿ ಕಟ್ಟಿಗೆ ಸಂಗ್ರಹಿಸುತ್ತಿದ್ದ. ಅವನು ನಿರಂತರ 'ವಿಠಲ, ವಿಠಲ' ಎಂದು ಜಪಿಸುತ್ತಿದ್ದ.
ನಾಮದೇವ, ನೋಡು. ರಾಖಾ ನಮ್ಮತ್ತ ಸ್ವಲ್ಪವೂ ಗಮನಕೊಡದೆ ಹೇಗೆ ನನ್ನ ನಾಮಜಪ ಮಾಡುತ್ತಿದ್ದಾನೆ!
ನಾಮದೇವ, ಹೀಗೆ ನಾಮಜಪ ಮಾಡುವುದಕ್ಕಾಗಿ ರಾಖಾ ತನ್ನ ಎಲ್ಲವನ್ನೂ ತ್ಯಾಗ ಮಾಡಿದ. ಅವನ ಭಕ್ತಿಯನ್ನು ಗಮನಕೊಟ್ಟು ನೋಡು.
ವಿಠಲ, ವಿಠಲ, ವಿಠಲ! ವಿಠಲ!
10
ರುಕ್ಮಿಣೀದೇವಿಯು ತನ್ನ ಅಮೂಲ್ಯವಾದ ಮಾಣಿಕ್ಯದ ಬಳೆಯನ್ನು ಕಟ್ಟಿಗೆಯ ನಡುವೆ ಅಡಗಿಸಿಟ್ಟಳು. ಅನಂತರ ಅವರಿಬ್ಬರೂ ಒಂದು ಮರದ ಹಿಂದೆ ಅಡಗಿ ನಿಂತು ರಾಖಾನನ್ನು ನೋಡಿದರು.
11
ರಾಖಾ ಒಂದು ಕಟ್ಟಿಗೆಯ ತುಂಡನ್ನು ಆರಿಸಿದ. ಆ ಮಾಣಿಕ್ಯದ ಬಳೆಯನ್ನು ಅವನು ಸಾಮಾನ್ಯ ಕಟ್ಟಿಗೆಯೆಂದೇ ಭಾವಿಸಿದ.
ಪಾಖಾ, ಈ ಮಾಣಿಕ್ಯದ ಬಳೆಯನ್ನು ನೋಡು. ನಿನಗಿದು ಬೇಕೆ?
ಸ್ವಾಮಿ ನನಗೆ ಬೇಡ. ಪಾಂಡುರಂಗ ನಮ್ಮನ್ನು ಪರೀಕ್ಷೆ ಮಾಡುತ್ತಿದ್ದಾನೆ. ನಾವು ಈ ಕ್ಷಣವೇ ಇಲ್ಲಿಂದ ಹೊರಟುಹೋಗೋಣ.




ಜೀವಿ ಶುದ್ಧವಾಗದ ಹೊರತು ಭಗವಂತನಲ್ಲಿ ಶ್ರದ್ಧೆ ಭಕ್ತಿ ಉಂಟಾಗದು — ಮನಸ್ಸು ಏಕಾಗ್ರವಾಗದು, ಸಿಕ್ಕಿಸಿಕ್ಕಿದ ಕಡೆಗೆ ಹರಿದು ಹೋಗುತ್ತಿರುತ್ತದೆ. ನೀನು ಸಾಂಸಾರಿಕ ಜೀವನವನ್ನು ನಡೆಸಿಕೊಂಡು ಹೋಗುತ್ತಿರುವುದೇನೂ ತಪ್ಪಲ್ಲ. ಆದರೆ ಭಗವಂತನ ಪಾದಪದ್ಮಗಳಲ್ಲಿ ಮನಸ್ಸನ್ನಿಟ್ಟು ಕಾಮನಾಶೂನ್ಯನಾಗಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿರಬೇಕು.

— ಶ್ರೀರಾಮಕೃಷ್ಣರು